1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:764/2023

ಪಿರ್ಯಾದಿಃ ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ 1. ಶಿವಕುಮಾರ್ ಎಸ್ ಬಿನ್ ಲೇಟ್ ಅರಸಯ್ಯ 24 ವರ್ಷ
ವಾಸಃಸಂಃ302, 2 ನೇ ಕ್ರಾಸ್, ಮುನೇಶ್ವರ ನಗರ, ಉದಯಗಿರಿ, ಮೈಸೂರು ಸಿಟಿ
2. ಉಮೇಶ ಬಿನ್ ನಾಗರಾಜು (ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)

ದೋಷಾರೋಪಣೆ

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ಟಿ ನರಸೀಪುರದ ವಾಸಿಯಾದ ಚಾಸಾ.1 ರವರು ಕೆಎ-01-ಸಿ-3756 ಪ್ಯಾಸೆಂಜರ್ ಆಟೋವನ್ನು ಓಡಿಸಿಕೊಂಡು ಜೀವನ ಮಾಡಿಕೊಂಡಿದ್ದು, ಅದರಂತೆ ದಿಃ16.02.2023 ರಂದು ಚಾಸಾ.1 ರವರು ಬೆಳಗ್ಗೆಯಿಂದ ಬಾಡಿಗೆಗೆ ಹೋಗಿ ರಾತ್ರಿ ಸುಮಾರು 09.45 ಗಂಟೆ ಸಮಯದಲ್ಲಿ ಬಾಡಿಗೆಗೆ ಕಾಯುತ್ತಿದ್ದಾಗ, 1ನೇ ಆರೋಪಿತರಾದ ನೀವು 2ನೇ ಆರೋಪಿತರ ಜೊತೆ ಸೇರಿ ಚಾಸಾ.1 ರವರ ಬಳಿ ಹೋಗಿ ಬಿಳಿಗೆರೆ ಗ್ರಾಮಕ್ಕೆ ಬಾಡಿಗೆಗೆ ಹತ್ತಿಕೊಂಡು ಬಿಳಿಗೆರೆ ಗ್ರಾಮಕ್ಕೆ ಬಂದು ಅಲ್ಲಿ ಚಾಸಾ.1 ರವರು ಬಿಳಿಗೆರೆ ಗ್ರಾಮ ಬಂತು ಎಂದು ಹೇಳಿದಾಗ, ಇನ್ನೂ ಮುಂದೆ ಸ್ವಲ್ಪ ನಡೆ ಎಂದು ಹೇಳಿ ರಾತ್ರಿ ಸುಮಾರು 10.45 ಗಂಟೆ ಸಮಯದಲ್ಲಿ ನಗರ್ಲೆ ಗ್ರಾಮದ ಚಾನಲ್ ಏರಿಯ ಬಳಿ ಹೋಗಿ ನಿಲ್ಲಿಸಿದಾಗ, 1ನೇ ಆರೋಪಿತರಾದ ನೀವು 2ನೇ ಆರೋಪಿತರ ಜೊತೆ ಸೇರಿ ಚಾಸಾ.1 ರವರಿಗೆ ಹೆದರಿಸಿ 1ನೇ ಆರೋಪಿತರಾದ ನೀವು ಚಾಸಾ.1 ರವರ ಬಳಿ ಇದ್ದ ರೂ.700/- ಗಳನ್ನು ಕಿತ್ತುಕೊಂಡಿರುತ್ತೀರಿ, ಚಾಸಾ.1 ರವರ ಬಳಿ ಇದ್ದ ರೆಡ್ ಮೀ ಮೊಬೈಲನ್ನು ಕಿತ್ತುಕೊಂಡು ಆರೋಪಿತರಾದ ನೀವು ಚಾಸಾ.1 ರವರನ್ನು ತಳ್ಳಿ ಅವರ ಆಟೋವನ್ನು ಸಹ ಸುಲಿಗೆ ಮಾಡಿ ಹೊರಟು ಹೋಗಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು

ಭಾರತ ದಂಡ ಸಂಹಿತೆಯ ಕಲಂ.392 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ

ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 14.01.2026 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಖ್ಯೆ:764/2023**

ಪಿರ್ಯಾದಿ : ಬಿಳಿಗೆರೆ ಪೊಲೀಸರು

ವಿರುದ್ಧ

ಆರೋಪಿ : **1. ಶಿವಕುಮಾರ್ ಎಸ್ ಬಿನ್ ಲೇಟ್ ಅರಸಯ್ಯ 24 ವರ್ಷ**
**ವಾಸ:ಸಂ:302, 2 ನೇ ಕ್ರಾಸ್, ಮುನೇಶ್ವರ ನಗರ, ಉದಯಗಿರಿ, ಮೈಸೂರು ಸಿಟಿ**

: ಆಪಾದನೆ :

ಪ್ರಶ್ನೆ-1 : ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ :

ಪ್ರಶ್ನೆ-2 : ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ :

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**